**0302/0**

**Third Semester 3 Yr. LL.B./VII Semester 5 Yr. B.A./B.B.A.LL.B. Degree Examination, June 2013**

# LABOUR LAW

Duration : 3 Hours | Max. Marks : 100

**Instructions** : 1. Answer **all** questions.

2. **One** essay type and **one** short note question or problem from **each unit** have to be attempted.
3. Figures to the **right** indicate marks.
4. Answers should be written **either** in English or Kannada **completely**.

## UNIT – I

Q. No. 1. (a) Explain the term 'workman'. Distinguish workman from independent contractor. Marks : 15

'ಕಾರ್ಮಿಕ' ಪದವನ್ನು ವಿವರಿಸಿ. ಕಾರ್ಮಿಕನನ್ನು ಸ್ವತಂತ್ರ ಗುತ್ತಿಗೆದಾರನಿಂದ ವ್ಯತ್ಯಾಸಿಸಿ.

OR/**ಅಥವಾ**

Discuss briefly the impact of industrial revolution of India upon workmen.

ಕಾರ್ಮಿಕರ ಮೇಲೆ ಭಾರತದ ಕೈಗಾರಿಕಾ ಕ್ರಾಂತಿಯ ಪರಿಣಾಮಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ.

(b) Dispute relating to dismissal of workman – Does it amount to industrial dispute ? Decide giving reason. Marks : 5

ಒಬ್ಬ ಕಾರ್ಮಿಕನನ್ನು ವಜಾ ಮಾಡುವುದರಿಂದ ಉಂಟಾಗುವ ವಿವಾದ–ಇದು ಕೈಗಾರಿಕಾ ವಿವಾದವೇ ? ಕಾರಣ ಸಹಿತ ತೀರ್ಮಾನಿಸಿ.

OR/**ಅಥವಾ**

Workers of a company wanted to celebrate 'Ayudha Pooja' one day earlier to the festival. They requested the company to declare holiday on that day and they were ready to compensate the loss of work by working on another holiday. But the management refused to declare holiday. Workers enbloc applied for casual leave. Does this amount to strike ? Give reason.

**P.T.O.**

StudentBounty.com
www.StudentBounty.com

StudentBounty.com

ಒಂದು ಕಂಪನಿಯ ಕೆಲಸಗಾರರು 'ಆಯುಧ ಪೂಜೆ' ಯನ್ನು ಒಂದು ದಿನ ಮೊದಲೆ ಆಚರಿಸಲು ಆ ದಿನ ರಜಾದಿನವೆಂದು ಘೋಷಿಸಬೇಕೆಂದು, ಆ ದಿನದ ಕೆಲಸದ ನಷ್ಟವನ್ನು ಇನ್ನೊಂದು 'ರಜೆಯ ದಿನ ಭರ್ತಿ ಮಾಡಿಕೊಡಲು ತಯಾರಿರುವುದಾಗಿಯೂ ಕೇಳಿಕೊಂಡರು. ಆದರೆ ಆಡಳಿತ ಮಂಡಳಿಯು ಹಾಗೆ ರಜೆ ಘೋಷಿಸಲು ನಿರಾಕರಿಸಿತು. ಎಲ್ಲಾ ಕೆಲಸಗಾರರು ಅಂದು ಒಟ್ಟಿಗೆ ಸಾಂದರ್ಭಿಕ ರಜೆಗೆ ಅರ್ಜಿ ಹಾಕಿದರು. ಇದು ಮುಷ್ಕರ ಎನಿಸಿಕೊಳ್ಳುತ್ತದೆಯೇ ? ಕಾರಣಕೊಡಿ.

## UNIT – II

Q. No. 2. (a) What is lay-off ? Explain the circumstances in which the laid-off workmen are not entitled lay-off compensation. Marks : 15

ಉದ್ಯೋಗಬಂಧಿ ಎಂದರೇನು ? ಯಾವ ಸಂದರ್ಭಗಳಲ್ಲಿ ಉದ್ಯೋಗಬಂಧಿ ಕಾರ್ಮಿಕರು, ಉದ್ಯೋಗಬಂಧಿ ಪರಿಹಾರವನ್ನು ಪಡೆಯಲು ಅರ್ಹರಲ್ಲ ಎಂಬುದನ್ನು ವಿವರಿಸಿ.

OR/**ಅಥವಾ**

What is unfair labour practice ? Explain various unfair labour practices on the part of the employer.

ಅನುಚಿತ ಕಾರ್ಮಿಕ ಆಚರಣೆ ಎಂದರೇನು ? ಮಾಲೀಕನ ವತಿಯಿಂದ ಆಗಬಹುದಾದ ವಿವಿಧ ಅನುಚಿತ ಕಾರ್ಮಿಕ ಆಚರಣೆಗಳನ್ನು ವಿವರಿಸಿ.

(b) The services of a workman is terminated due to loss of confidence by the employer – Does it amount to retrenchment ? Decide giving reason. Marks : 5

ನಂಬಿಕೆ ಕಳೆದುಕೊಂಡ ಕಾರ್ಮಿಕನನ್ನು ಮಾಲೀಕನು ಕೆಲಸದಿಂದ ವಜಾ ಮಾಡುವಿಕೆ – ಇದು ಖೋತಾ ಮಾಡುವಿಕೆಯಾಗುತ್ತದೆಯೇ ? ಕಾರಣ ಸಹಿತ ತೀರ್ಮಾನಿಸಿ.

OR/**ಅಥವಾ**

Write note on 'recovery of money due from an employer'.

ಮಾಲೀಕನಿಂದ ಸಲ್ಲಬೇಕಾಗಿರುವ ಹಣ ವಸೂಲಿಯ ಬಗ್ಗೆ ಟಿಪ್ಪಣಿ ಬರೆಯಿರಿ.

## UNIT – III

Q. No. 3. (a) Define 'Trade Union'. Examine the extent of immunities available to registered trade union from civil and criminal liabilities. Marks : 15

'ಕಾರ್ಮಿಕ ಸಂಘ' ವ್ಯಾಖ್ಯಾನಿಸಿ. ಕಾರ್ಮಿಕ ಸಂಘಕ್ಕೆ ಸಿವಿಲ್ ಮತ್ತು ಕ್ರಿಮಿನಲ್ ಬಾಧ್ಯತೆಯಿಂದ ಉನ್ಮುಕ್ತಿ ದೊರೆಯುವ ವ್ಯಾಪ್ತಿಯನ್ನು ಪರೀಕ್ಷಿಸಿ.

OR/**ಅಥವಾ**

www.StudentBounty.com

What is personal injury ? When is the employer not liable to pay compensation for personal injuries by accident under Workmen's Compensation Act ? Discuss.

ವೈಯಕ್ತಿಕ ಕ್ಷತಿ ಎಂದರೇನು ? ಕಾರ್ಮಿಕರ ಪರಿಹಾರ ಅಧಿನಿಯಮದನ್ವಯ ಯಾವ ಸಂದರ್ಭಗಳಲ್ಲಿ ಮಾಲೀಕನು ಅಪಘಾತದಿಂದುಂಟಾಗುವ ವೈಯಕ್ತಿಕ ಹಾನಿಗೆ ಜವಾಬ್ದಾರನಲ್ಲ ? ಚರ್ಚಿಸಿ.

(b) The workman died due to natural lightning while working at the site – Is the employer liable to pay compensation ? Decide giving reason. Marks : 5

ಕಾರ್ಮಿಕನು ತನ್ನ ಕರ್ತವ್ಯದಲ್ಲಿ ನಿರತನಾಗಿದ್ದಾಗ ನೈಸರ್ಗಿಕ ಸಿಡಿಲಿನ ಹೊಡೆತದಿಂದ ಮೃತಪಟ್ಟನು. ಮಾಲೀಕನು ಪರಿಹಾರ ಕೊಡಲು ಹೊಣೆಗಾರನೇ ? ಕಾರಣ ಸಹಿತ ತೀರ್ಮಾನಿಸಿ.

OR/**ಅಥವಾ**

Injury sustained by a workman in the factory while taking his mid-day meal during the internal period – Is it an injury connected with the employment ? Give reason.

ಮಧ್ಯಂತರ ವಿರಾಮದ ವೇಳೆಯಲ್ಲಿ ಕಾರ್ಖಾನೆಯಲ್ಲಿ ಊಟ ಮಾಡುತ್ತಿರುವಾಗ ಕಾರ್ಮಿಕನಿಗೆ ಹಾನಿಯುಂಟಾಯಿತು – ಇದು ಉದ್ಯೋಗಕ್ಕೆ ಸಂಬಂಧಪಟ್ಟ ಹಾನಿಯೇ ? ಕಾರಣ ಕೊಡಿ.

## UNIT – IV

Q. No. 4. (a) Explain the provisions relating to adjudication of disputes and claims under the Employees State Insurance Act, 1948. Marks : 15

1948 ರ ಕಾರ್ಮಿಕರ ರಾಜ್ಯ ವಿಮಾ ಕಾಯಿದೆಯಡಿಯಲ್ಲಿ ವಿವಾದಗಳ ನ್ಯಾಯನಿರ್ಣಯ ಮತ್ತು ಕ್ಲೇಮುಗಳಿಗೆ ಸಂಬಂಧಿಸಿದ ಉಪಬಂಧಗಳನ್ನು ವಿವರಿಸಿ.

OR/**ಅಥವಾ**

Define contribution, examine the law relating to contribution by the employer and employees under the Provident Fund Act, 1952.

ವಂತಿಗೆ ವ್ಯಾಖ್ಯಾನಿಸಿ. 1952 ರ ಭವಿಷ್ಯನಿಧಿ ಕಾಯಿದೆಯಡಿಯಲ್ಲಿ ಮಾಲೀಕರು ಹಾಗೂ ಕಾರ್ಮಿಕರಿಂದ ವಂತಿಗೆಯ ಬಗ್ಗೆ ಇರುವ ಕಾನೂನನ್ನು ಪರಿಶೀಲಿಸಿ.

StudentBounty.com

www.StudentBounty.com

(b) Write note on 'Medical Benefit Council' under Employees State Insurance Act. Marks : 5

ಕಾರ್ಮಿಕರ ರಾಜ್ಯ ವಿಮಾ ಅಧಿನಿಯಮದಡಿಯಲ್ಲಿನ 'ವೈದ್ಯಕೀಯ ಪ್ರಯೋಜನ ಪರಿಷತ್ತಿನ' ಬಗ್ಗೆ ಟಿಪ್ಪಣಿ ಬರೆಯಿರಿ.

OR/**ಅಥವಾ**

Examine the features of Maternity Benefit Act, 1961.

1961ರ, ಹೆರಿಗೆ ಭತ್ಯೆ ಕಾಯಿದೆಯ ಲಕ್ಷಣಗಳನ್ನು ಪರಿಶೀಲಿಸಿ.

## UNIT – V

Q. No. 5. (a) Briefly explain the various provisions relating to safety measures under the Factories Act. Marks : 15

ಕಾರ್ಖಾನೆಗಳ ಅಧಿನಿಯಮದಲ್ಲಿ ಸುರಕ್ಷತೆಗೆ ಸಂಬಂಧಪಟ್ಟ ಉಪಬಂಧಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

OR/**ಅಥವಾ**

What is the object of Minimum Wages Act ? Explain the provision relating to hours of normal working day under the Act.

ಕನಿಷ್ಠ ವೇತನ ಕಾಯಿದೆಯ ಉದ್ದೇಶವೇನು? ಸಾಮಾನ್ಯ ಕೆಲಸದ ದಿನದ ವೇಳೆಗಳ ಬಗ್ಗೆ ಕಾಯಿದೆಯಡಿಯಲ್ಲಿ ಇರುವ ಉಪಬಂಧವನ್ನು ವಿವರಿಸಿ.

(b) A person employed to clean machinery in a factory – Is he worker ? Decide with reasons. Marks : 5

ಯಂತ್ರಗಳನ್ನು ಸ್ವಚ್ಛಗೊಳಿಸಲು ನೇಮಕವಾಗಿರುವ ವ್ಯಕ್ತಿ ಕೆಲಸಗಾರನೇ? ಕಾರಣ ಸಹಿತ ತೀರ್ಮಾನಿಸಿ.

OR/**ಅಥವಾ**

Examine the object and scope of Contract Labour (Regulation and Abolition) Act, 1970.

1970 ರ ಕರಾರು ಕಾರ್ಮಿಕ (ನಿಯಂತ್ರಣ ಮತ್ತು ರದ್ಧತಿ) ಕಾಯಿದೆಯ ಉದ್ದೇಶ ಮತ್ತು ವ್ಯಾಪ್ತಿಯನ್ನು ಪರಿಶೀಲಿಸಿ.

StudentBounty.com

www.StudentBounty.com